◆ **ಪೋಷಕ ಕಲೆಯಾಗಿ ಗುರುತಿಸಿಕೊಂಡಿರುವ ಶಾಸ್ತ್ರೀಯ ನೃತ್ಯ ಕ್ಷೇತ್ರದಲ್ಲಿ ಪ್ರತಿರೋಧದ ಧ್ವನಿಯೆತ್ತುವುದು ಸುಲಭವೇನಲ್ಲ. ಆದರೆ ನೀವು ಪ್ರತಿರೋಧದ ಮಾತುಗಳನ್ನಾಡಲು ಹಿಂಜರಿದವರಲ್ಲ. ಇಷ್ಟೊಂದು ಧೈರ್ಯ ನಿಮ್ಮಲ್ಲಿ ಹೇಗೆ ಮೂಡಿತು? ಅದಕ್ಕೆ ನಿಮ್ಮ ಬಾಲ್ಯ ಕಾರಣವೇ?**

ಬಾಲ್ಯ ಕಾರಣವಾಗಿರಲೂಬಹುದು. ನಾನು ಹುಟ್ಟಿ ಬೆಳೆದಿದ್ದು ಲಖನೌದಲ್ಲೇ. ಬಾಲ್ಯದಲ್ಲಿ ನಾನು ಕಂಡ ಲಖನೌದಲ್ಲಿ ಜಾತ್ಯತೀತತೆ, ಸಹಿಷ್ಣುತೆ ಎನ್ನುವುದು ಬೋಧನೆಯ ವಿಷಯವಾಗಿರಲಿಲ್ಲ. ನಾವೆಲ್ಲ ಹಾಗೆಯೇ ಬಾಳುತ್ತಿದ್ದೆವು. ನನ್ನ ಕುಟುಂಬದಲ್ಲಿ ಬಹುತೇಕರು, ಶಿಕ್ಷಣ, ಉದ್ಯೋಗದತ್ತ ಹೆಚ್ಚು ಒಲವುಳ್ಳವರಾಗಿದ್ದರು. ನನ್ನ ಅಜ್ಜ ಜಸ್ಟೀಸ್ ಹರಿಶಂಕರ್ ಚತುರ್ವೇದಿ ಅವರು ಲಖನೌ ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ನ್ಯಾಯಮೂರ್ತಿಗಳಾಗಿ ಕೆಲಸ ಮಾಡಿದ್ದರು. ತಂದೆ ಪ್ರೊ. ರವಿಶಂಕರ್ ಚತುರ್ವೇದಿ ರೂರ್ಕಿ ಐಐಟಿಯಲ್ಲಿ ಪ್ರೊಫೆಸರ್ ಆಗಿದ್ದು, ಖಗೋಳ ವಿಜ್ಞಾನಿಯಾಗಿದ್ದರು. ಲಖನೌದಲ್ಲಿ ರಿಮೋಟ್ ಸೆನ್ಸಿಂಗ್ ಅಪ್ಲಿಕೇಷನ್ಸ್ ಸೆಂಟರ್ ಅನ್ನು ಸ್ಥಾಪಿಸಿದ್ದರು. ಅಮ್ಮ ಸುಧಾ ಚತುರ್ವೇದಿ ಉನ್ನತ ಶಿಕ್ಷಣ ಪಡೆದ ಮಹಿಳೆಯಾಗಿದ್ದು, ಮಹಿಳಾಪರ ಚಟುವಟಿಕೆಗಳಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದರು. ನಾನು ಕಾರ್ಮೆಲ್ ಕಾನ್ವೆಂಟ್‌ನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದೆ ಮತ್ತು ಲಖನೌ ವಿಶ್ವವಿದ್ಯಾಲಯದಲ್ಲಿ ಎಂ.ಎಸ್ಸಿ ಮಾಡಿದೆ. ಉತ್ತರ ಪ್ರದೇಶದ ಸಂಗೀತ ನಾಟಕ ಅಕಾಡೆಮಿಯ ಕಥಕ್ ಕೇಂದ್ರದಲ್ಲಿ ಕಥಕ್‌ನ ಬಾಲಪಾಠಗಳನ್ನು ಕಲಿತುಕೊಂಡೆ. ಪಂಡಿತ್ ಅರ್ಜುನ್ ಮಿಶ್ರಾ ಕಥಕ್ ಕಲಿಸಿದರು. ಕಲಾನಿಧಿ ನಾರಾಯಣ್ ಮತ್ತು ಗುರು ಪ್ರಿಯದರ್ಶಿನಿ ಗೋವಿಂದ್ ಅಭಿನಯ ಹೇಳಿಕೊಟ್ಟರು. ಗುರು ಪ್ರೊತಿಮಾ ಬೇಡಿ, ಗುರು ಕುಮುದಿನಿ ಲಾಖಿಯಾ ಅವರು ನನ್ನ ನೃತ್ಯವನ್ನು ತಿದ್ದಿ ತೀಡಿದರು.

ನೃತ್ಯ ಮತ್ತು ಸೂಫಿ ಸಾಹಿತ್ಯದತ್ತ ನಾನು ಆಕರ್ಷಿತಳಾದಾಗ ಮನೆಯಿಂದ ಯಾವುದೇ ಆಕ್ಷೇಪ ವ್ಯಕ್ತವಾಗಲಿಲ್ಲ. ಸೂಫಿ ಸಂಗೀತಗಾರರು, ಸಾಹಿತಿಗಳೊಡನೆ ಚರ್ಚಿಸುತ್ತ ಹೆಚ್ಚಿನ ವಿಷಯಗಳನ್ನು ಕಲಿಯುತ್ತಿದ್ದೆ. ಆದರೆ ಅಪ್ಪ ಒಂದು ಎಚ್ಚರಿಕೆಯ ಮಾತು ಹೇಳಿದರು. ನೃತ್ಯವನ್ನು ಕಲಿಯುವುದಕ್ಕೆ ಯಾವುದೇ ಆಕ್ಷೇಪ ಹೇಳುವುದಿಲ್ಲ. ಆದರೆ ಪದವಿ ಓದಿಗೆ ಅದರಿಂದ ತೊಂದರೆ ಮಾಡಿಕೊಳ್ಳಬೇಡ. ಅಪ್ಪನ ಮಾತಿನಂತೆ ಬಿ.ಎಸ್ಸಿ ಮಾಡಿ ಪರಿಸರ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿಯನ್ನೂ ಅತ್ಯುತ್ತಮ ಅಂಕಗಳೊಂದಿಗೆ ಪಡೆದೆ. ಜೊತೆಜೊತೆಗೆ ನೃತ್ಯ ಮತ್ತು ಓದು ಮುಂದುವರೆದಿತ್ತು. ಮಗಳಾಗಲೀ ಮಗನಾಗಲೀ ಸ್ವತಂತ್ರವಾಗಿ ತನ್ನ ಕಾಲಮೇಲೆ ನಿಲ್ಲಬೇಕು ಎನ್ನುವುದು ಅಪ್ಪನ ಆಲೋಚನೆಯಾಗಿತ್ತು. ನೃತ್ಯದಿಂದ ಸಂಪಾದನೆ ಸಾಧ್ಯವೇ ಎನ್ನುವ ಅಳುಕು ಅವರಲ್ಲಿ ಇದ್ದಿರಬೇಕು. ಹಾಗಾಗಿ ನನ್ನ ಓದಿಗೆ ಹೆಚ್ಚಿನ ಒತ್ತು ಕೊಡುವಂತೆ ಹೇಳುತ್ತಿದ್ದರು. ನನ್ನ ಜೀವನದಲ್ಲಿ ಬಹಳ ಪ್ರಭಾವೀ ವರ್ಷಗಳು ಅವು.

◆ **ಕಥಕ್ ಎಂಬ ಕಲಾಪ್ರಕಾರವನ್ನು ನೀವು ಭೇಟಿಯಾಗಿದ್ದು ಅಚ್ಚರಿಯೇನಲ್ಲ. ಆದರೆ ಸೂಫಿ ಸಂಗೀತದ ಒಲವು ಕುಡಿಯೊಡೆದಿದ್ದು ಎಲ್ಲಿ? ಹೇಗೆ?**

ನಾನು ಕಥಕ್ ಕಲಿತು, ಸೂಫಿ ಸಂಗೀತ ಕಲಿತು, ಅವೆರಡಕ್ಕೂ ಮದುವೆ ಮಾಡಿಸಿದ್ದೇನೆ ಎಂದು ಜನರು ಹೇಳುವುದುಂಟು. ಒಮ್ಮೆ ನಾನು ಸಿನಿಮಾ ನಿರ್ಮಾಪಕ ಮುಝಾಫರ್ ಅಲಿ ಅವರನ್ನು ಭೇಟಿಯಾದೆ. ಅವರು ಮೂಲತಃ ಓರ್ವ ಸೂಫಿ ಸಂಗೀತ ಪ್ರಿಯರಾಗಿದ್ದರು. ಲಖನೌದ ಸಂಸ್ಕೃತಿ, ಅವಧ್‌ನ ಸಾಂಸ್ಕೃತಿಕ ಚಹರೆಗಳನ್ನು ಬಲ್ಲವರಾಗಿದ್ದರು. ಈ ವಿಚಾರಗಳ ಮೇಲೆ ಅನೇಕ ಸಿನಿಮಾಗಳಿಗೆ ಕೆಲಸ ಮಾಡಿದ್ದರು. ಸಂಗೀತವನ್ನು ಸಂಯೋಜಿಸಿದ್ದರು. ಭಾರತ ಮತ್ತು ಮಧ್ಯ ಏಷ್ಯಾದ ವಿವಿಧ ಕವ್ವಾಲಿಗಳ ಕುರಿತು ಕೆಲಸ ಮಾಡಿದ್ದರು. ಒಟ್ಟಿನಲ್ಲಿ ಅವರು ಹೃದಯದಿಂದ ಓರ್ವ ಸೂಫಿಯಾಗಿದ್ದರು. ಅವರ ಭೇಟಿಯೊಂದಿಗೆ ನನಗೆ ಸೂಫಿ ಸಂಗೀತದ ಪರಿಚಯವಾಯಿತು.

ನಾನು ಕಾಲೇಜಿನಲ್ಲಿದ್ದಾಗ ಒಂದು ಕವ್ವಾಲಿ ಸಂಗೀತ ಪ್ರಸ್ತುತಿಯನ್ನು ಮೊದಲ ಬಾರಿಗೆ ನೋಡಿದಾಗ ಅದು ನನ್ನನ್ನು ಬಹಳಷ್ಟು ಆಕರ್ಷಿಸಿತು. ಕವ್ವಾಲಿಯ ಚರಣಗಳನ್ನು ಕೇಳುತ್ತಿರುವಾಗ ನಾನು ಅದರ ಪ್ರವಾಹದಲ್ಲಿ ಎಷ್ಟೊಂದು ಕಳೆದುಹೋಗುತ್ತಿದ್ದೆನೆಂದರೆ, ಬಾಹ್ಯದ ಅರಿವಿಲ್ಲದೆ